104176

No. of Printed Pages : **11**

# GS-467

VI Semester B.Com. Examination, May/June 2019

## COMMERCE

## 6.3 : INCOME TAX-II

(CBCS) (F+R) (2016-17 & Onwards)

Time : 3 Hours

Max. Marks : 70

***Instructions :*** *Answer should be written completely either in English or Kannada.*

ವಿಭಾಗ – ಎ / **SECTION - A**

1. ಯಾವುದಾದರೂ **5** ಉಪಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಉಪಪ್ರಶ್ನೆಗೆ **2** ಅಂಕಗಳು. **5x2=10**

Answer **any Five** sub-questions . Each sub-question carries **Two** marks .

(a) ವೃತ್ತಿ ಎಂದರೇನು ?

What is Profession ?

(b) ವ್ಯವಹಾರದ ಲಾಭವನ್ನು ಕಂಡುಹಿಡಿಯುವಾಗ, ಸ್ವೀಕರಿಸಬಹುದಾದ ನಾಲ್ಕು ವೆಚ್ಚಗಳನ್ನು ತಿಳಿಸಿ.

Mention any four admissible expenses while calculating income from Business.

(c) ದೀರ್ಘಾವಧಿ ಬಂಡವಾಳ ಲಾಭ ಎಂದರೇನು ?

What is Long Term Capital Gain ?

(d) ಕಲಂ 80GGA ಅಡಿಯಲ್ಲಿನ ನಿಬಂಧನೆ ತಿಳಿಸಿ.

State the provision U/S 80GGA.

(e) ತೆರಿಗೆ ಮುಕ್ತ ಸರ್ಕಾರಿ ಭದ್ರತಾ ಪತ್ರಗಳೆಂದರೇನು ?

What is Tax Free Government Security ?

(f) ಕಲಂ 80G ಅಡಿಯಲ್ಲಿನ ದೇಣಿಗೆಗಳ ಪೈಕಿ ಯಾವುದಾದರೂ 2 ಮಿತಿಯಿಲ್ಲದ ಶೇ 100 ರಷ್ಟು ಕಳೆಯಬಹುದಾದ ದೇಣಿಗೆಗಳನ್ನು ಹೆಸರಿಸಿ.

Mention any two no limit 100% deductible donations U/S 80G.

(g) ಕುದುರೆ ಜೂಜಿನಿಂದ ಪಡೆದ ಮೊತ್ತ ₹ 2,10,000 (ನಿವ್ವಳ), ಹಾಗಾದರೆ ಸ್ಥೂಲ ಮೊತ್ತವನ್ನು ಕಂಡುಹಿಡಿಯಿರಿ.

If net income from horse race is ₹ 2,10,000, find the Gross amount.

ವಿಭಾಗ – ಬಿ / **SECTION - B**

ಯಾವುದಾದರೂ **3** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ **6** ಅಂಕಗಳು. **3x6=18**

Answer **any three** questions . Each question carries **six** marks.

**2.** X ಸುಮಾರು 45 ವರ್ಷದ ಭಾರತೀಯ ನಿವಾಸಿ, ತೆರಿಗೆ ವರ್ಷ 2018-19 ಕ್ಕೆ ಅನ್ವಯವಾಗುವಂತೆ ಈ ಕೆಳಗಿನ ವಿಷಯಗಳನ್ನು ತಿಳಿಸಿದ್ದಾರೆ

(a) ವೇತನದ ಆದಾಯ (ಕಂಡುಹಿಡಿದ) ₹ 2,80,000

(b) ಮನೆಯ ಸ್ವತ್ತಿನ ಆದಾಯ (ಕಂಡುಹಿಡಿದ) ₹ 90,000

(c) ಜೀವ ವಿಮೆ ಕಟ್ಟಿದ್ದು ₹ 30,000

X ಅವರ ತೆರಿಗೆಯ ಹೊಣೆಗಾರಿಕೆಯನ್ನು ತೆರಿಗೆ ವರ್ಷ 2018-19 ಕ್ಕೆ ಕಂಡುಹಿಡಿಯಿರಿ.

Mr. X, resident in India, aged about 45 years, submits the following information for the A.Y. 2018-19.

(a) Income from Salary (computed) ₹ 2,80,000

(b) Income from House Property (computed) ₹ 90,000

(c) Life Insurance premium paid ₹ 30,000

Calculate his tax liability for the A.Y. 2018-19.

**3.** ಈ ಕೆಳಗಿನ ನಷ್ಟಗಳ ಹೊಂದಾಣಿಕೆ ಮತ್ತು ಮುಂದುವರಿಸುವಿಕೆ ಸಂಬಂಧಪಟ್ಟ ಆದಾಯ ತೆರಿಗೆ ಕಾಯಿದೆಯ ನಿಯಮಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

(a) ಅಲ್ಪಾವಧಿ ಬಂಡವಾಳ ನಷ್ಟ

(b) ಮನೆ ಸ್ವತ್ತು ಇದರಿಂದ ಆದ ನಷ್ಟ

(c) ಸಟ್ಟಾ ವ್ಯವಹಾರದಿಂದ ಆದ ನಷ್ಟ

Briefly explain IT Provision for set off and carry forward of the following losses.

(a) Short term capital loss

(b) Loss from property

(c) Speculative business loss

**4.** ಶ್ರೀ ರಮೇಶ್ ಅವರು ಆರ್ಥಿಕ ವರ್ಷ 2017–18 ಕ್ಕೆ ಸಂಬಂಧಪಟ್ಟಂತೆ ಈ ಕೆಳಗಿನ ಹೂಡಿಕೆಗಳನ್ನು ಹೊಂದಿದ್ದಾರೆ :

(a) ₹ 10,00,000 ಶೇ 5 ರಂತೆ ಉತ್ತರ ಪ್ರದೇಶ ಸರ್ಕಾರದ ಭದ್ರತೆಗಳು

(b) ₹ 4,00,000 ಶೇ 6 ABC ಕಂಪನಿಯ ಸಾಲಪತ್ರಗಳು

(c) ₹ 3,60,000 ಶೇ 10 PQR ಕಂಪನಿಯ ತೆರಿಗೆ ಮುಕ್ತ ಸಾಲಪತ್ರಗಳು

(d) ₹ 1,50,000 ಶೇ 5 HDFC ಯ ಬಾಂಡ್ಸ್

(e) ₹ 3,50,000 ಶೇ 6.25 ICICI ನ ಬಾಂಡ್ಸ್

(f) ₹ 2,50,000 ಶೇ 8 IDBI ನ ಬಾಂಡ್ಸ್

ದಿನಾಂಕ 1.12.2017 ರಂದು ಶ್ರೀ ರಮೇಶ್ ಅವರು ABC ಕಂಪನಿಯ ಸಾಲಪತ್ರಗಳನ್ನು ಮಾರಿದ್ದಾರೆ. ಈ ಸಾಲಪತ್ರಗಳ ಮೇಲೆ ಬಡ್ಡಿಯನ್ನು ಕೊಡುವ ದಿನಾಂಕ ಪ್ರತಿ ವರ್ಷ ಜೂನ್ 15 ಮತ್ತು ಡಿಸೆಂಬರ್ 15 ಆಗಿರುತ್ತದೆ.

ತೆರಿಗೆ ವರ್ಷ 2018-19 ಕ್ಕೆ ಅನ್ವಯವಾಗುವಂತೆ ಇವರ ಇತರ ಮೂಲಗಳಿಂದ ಗಳಿಸಿದ ಆದಾಯವನ್ನು ಕಂಡುಹಿಡಿಯಿರಿ.

Mr. Ramesh has the following investments for the Financial Year 2017-18 :

(a) ₹ 10,00,000 5% UP Government Security

(b) ₹ 4,00,000 6% Debentures of ABC Ltd.

(c) ₹ 3,60,000 10% Tax free Debentures of PQR Ltd.

(d) ₹ 1,50,000 5% HDFC Bonds

(e) ₹ 3,50,000 6.25% ICICI Bonds

(f) ₹ 2,50,000 8% IDBI Bonds

On 1.12.2017 he sells Debentures of ABC Ltd on which date of interest is June 15 and December 15 every year.

Calculate his income from other sources for the A.Y. 2018-19.

5. ಆದಾಯ ತೆರಿಗೆ ಕಾಯಿದೆ ಕಲಂ 80-C ಅಡಿಯಲ್ಲಿ ಬರುವ ಯಾವುದಾದರೂ 5 ಅಂಶಗಳನ್ನು ತಿಳಿಸಿರಿ. ಅಂತೆಯೇ, ಈ ಕಲಂನಲ್ಲಿ ಕಳೆಯಬಹುದಾದ ಗರಿಷ್ಠ ಮೊತ್ತವನ್ನು ತಿಳಿಸಿ.

Mention any five items qualified for deduction U/S 80-C of IT Act. Also mention the maximum amount of deduction allowable under this section.

6. ದಿನಾಂಕ ಜುಲೈ 4, 2017 ರಂದು ಶ್ರೀಹರಿ ಎಂಬುವರು ಬೆಂಗಳೂರು ನಗರಸಭೆಯ ವ್ಯಾಪ್ತಿಯಲ್ಲಿರುವ ಕೃಷಿ ಭೂಮಿಯನ್ನು ₹ 75,00,000 ಕ್ಕೆ ಮಾರಿ ಅದರ ಮೇಲೆ ಶೇ 2 ರಷ್ಟು ದಲ್ಲಾಳಿಯನ್ನು ಕೊಟ್ಟಿದ್ದಾರೆ. ಇವರು ಈ ಕೃಷಿ ಭೂಮಿಯನ್ನು ₹ 15,18,000 ಗಳಿಗೆ ದಿನಾಂಕ ಮಾರ್ಚ್ 1, 2007 ರಂದು ಖರೀದಿಸಿದ್ದಾರೆ. ದಿನಾಂಕ ಮಾರ್ಚ್ 15, 2018 ರಂದು ಇವರು ಗ್ರಾಮೀಣ ಪ್ರದೇಶದಲ್ಲಿರುವ ಕೃಷಿ ಭೂಮಿಯನ್ನು ₹ 10,00,000 ಹಣವನ್ನು ಕೊಟ್ಟು ಖರೀದಿಸಿದ್ದಾರೆ.

ಹಣದುಬ್ಬರದ ಸೂಚ್ಯಂಕ 2006-07 : 122 ಮತ್ತು 2017-18 : 272. ತೆರಿಗೆ ವರ್ಷ 2018-19 ಕ್ಕೆ ಅನ್ವಯವಾಗುವಂತೆ ಬಂಡವಾಳ ಲಾಭವನ್ನು ಕಂಡುಹಿಡಿಯಿರಿ.

Srihari sells agricultural land situated within the municipal limits of Bangalore for ₹ 75,00,000 and paid 2% commission on July 4, 2017, which was purchased by him on March 1, 2007, for ₹ 15,18,000. On $15^{th}$ March 2018, he purchases a rural agricultural land for ₹ 10,00,000.

Compute his income from capital gain for the A.Y. 2018-19 . CII for the years 2006-07 : 122 and 2017-18 : 272.

## ವಿಭಾಗ – ಸಿ / SECTION - C

ಯಾವುದಾದರೂ **3** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ **14** ಅಂಕಗಳು. **3x14=42**

Answer **any three** questions. Each question carries **Fourteen** marks.

**7.** ಈ ಕೆಳಗಿನ ವಿಷಯಗಳಿಂದ ಶ್ರೀ ಪ್ರಾಣೇಶ್ ಅವರ ಇತರ ಮೂಲಗಳಿಂದ ಬಂದ ಆದಾಯವನ್ನು ತೆರಿಗೆ ವರ್ಷ 2018-19 ಕ್ಕೆ ಅನ್ವಯಿಸುವಂತೆ ಕಂಡುಹಿಡಿಯಿರಿ.

(a) ಪಠ್ಯಪುಸ್ತಕಗಳಿಂದ ಬಂದ ರಾಜಧನ ₹ 3,20,000 (ಈ ಆದಾಯವನ್ನು ಗಳಿಸಲು ಮಾಡಿದ ವೆಚ್ಚ ₹ 20,000)

(b) ನಿರ್ದೇಶಕರು ಸಂಭಾವನೆ ₹ 35,000 ಹಣವನ್ನು X ಕಂಪನಿಯಿಂದ ಪಡೆದಿದ್ದು.

(c) ಇವರು ಪ್ರತಿ ತಿಂಗಳು ₹ 40,000 ರಂತೆ ಬಾಡಿಗೆ ಕೊಟ್ಟು ಮನೆಯಲ್ಲಿ ವಾಸಿಸುತ್ತಿದ್ದಾರೆ. ಈ ಮನೆಯ ಶೇ 40 ರಷ್ಟು ಭಾಗವನ್ನು ಉಪ ಬಾಡಿಗೆಗೆ ₹ 30,000 ಪ್ರತಿ ತಿಂಗಳಿಗೆ ನೀಡಿರುತ್ತಾರೆ. ಈ ಕೆಳಗೆ ತಿಳಿಸಿರುವ ಖರ್ಚುಗಳನ್ನು ಇಡೀ ಮನೆಯ ಮೇಲೆ ಮಾಡಿರುತ್ತಾರೆ.

(1) ನಗರ ಸಭೆಯ ತೆರಿಗೆ ₹ 12,000

(2) ವಿಮೆ ₹ 10,000

(3) ದುರಸ್ತಿ ಖರ್ಚು ₹ 15,000

(d) ಕಟ್ಟಡವನ್ನು ಯಂತ್ರೋಪಕರಣ ಸಹಿತ ಕೊಟ್ಟ ಬಾಡಿಗೆಯಿಂದ ಬಂದ ಹಣ ಮಾಸಿಕ ₹ 60,000. ಈ ಕೆಳಗೆ ತಿಳಿಸಿರುವ ಖರ್ಚುಗಳನ್ನು ಕೇಳಿದ್ದಾರೆ.

(1) ಸವಕಳಿ ₹ 45,000

(2) ದುರಸ್ತಿ ಖರ್ಚು ₹ 32,500

(e) ರಾಜಸ್ಥಾನದಲ್ಲಿರುವ ಕೃಷಿ ಭೂಮಿಯಿಂದ ಬಂದ ಆದಾಯ ₹ 3,50,000

(f) ವಿಮೆ ದಲ್ಲಾಳಿಯನ್ನು ಪಡೆದಿದ್ದು ₹ 90,000 (ನಿವ್ವಳ). ಈ ಆದಾಯವನ್ನು ಗಳಿಸಲು ಮಾಡಿದ ಖರ್ಚು ₹ 15,500

(g) ಕರ್ನಾಟಕ ಸರ್ಕಾರ ಲಾಟರಿಯಿಂದ ಬಂದ ಹಣ ₹ 4,00,000 (ಸ್ಥೂಲ)

(h) ಬ್ಯಾಂಕಿನ ಠೇವಣಿಯಿಂದ ಬಂದ ಬಡ್ಡಿ ಹಣ ₹ 90,000 (ನಿವ್ವಳ)

(i) ಹಿಂದೂ ಅವಿಭಕ್ತ ಆಸ್ತಿಯಿಂದ ಬಂದ ಪಾಲು ₹ 1,50,000

From the following information of Mr. Pranesh compute his income from other sources for the A.Y. 2018-19.

(a) Royalty from textbooks ₹ 3,20,000 (expenses incurred in earning royalty income ₹ 20,000)

(b) Director sitting fee received from X Co. ₹ 35,000

(c) He is residing in a rented house on a rent of ₹ 40,000 P.M. He sublets 40% of the house to a subtenant on a rent of ₹ 30,000 P.M. He has incurred the following expenses on the entire property.

(1) Municipal tax ₹ 12,000

(2) Insurance ₹ 10,000

(3) Repairs ₹ 15,000

(d) Rent from letting of building along with machinery ₹ 60,000 P.M. He claims the following expenses.

(1) Depreciation ₹ 45,000

(2) Repairs ₹ 32,500

(e) Income from agriculture in Rajasthan ₹ 3,50,000

(f) Insurance Commission received ₹ 90,000 (net) and expenses incurres in earning insurance commission ₹ 15,500

(g) Winning from Karnataka State Lottery ₹ 4,00,000 (Gross)

(h) Interest on Bank Deposit received ₹ 90,000 (net)

(i) Share from HUF ₹ 1,50,000

**8.** ಶ್ರೀ A ಎಂಬುವರು ಈ ಕೆಳಗಿನ ವಿಷಯಗಳನ್ನು ಒದಗಿಸಿದ್ದಾರೆ :

(a) ವೇತನದ ಆದಾಯ (ಕಂಡುಹಿಡಿದ) ₹ 10,50,000

(b) ಮನೆಯ ಸ್ವತ್ತಿನ ಆದಾಯ (ಕಂಡುಹಿಡಿದ) ₹ 2,50,000

(c) ಬ್ಯಾಂಕಿನ ನಿಶ್ಚಿತ ಠೇವಣಿಯಿಂದ ಬಂದ ಆದಾಯ ₹ 45,000 (ನಿವ್ವಳ)

(d) ಕುದುರೆ ಜೂಜಿನಿಂದ ಪಡೆದ ಹಣ ₹ 70,000 (ನಿವ್ವಳ)

(e) ಜೀವ ವಿಮೆ ಕಟ್ಟಿದ್ದು ₹ 70,000

(f) PPF ಗೆ ಕಟ್ಟಿದ್ದ ಹಣ ₹ 30,000

(g) ವಾಸದ ಮನೆಯ ಬಾಡಿಗೆ ಕಟ್ಟಿದ್ದು ತಿಂಗಳಿಗೆ ₹ 12,000 (ಇವರಿಗೆ ಯಾವುದೇ ವಾಸದ ಮನೆಯಿಲ್ಲ)

(h) ಬ್ಯಾಂಕಿನ ಕ್ರಾಸ್ಡ್ ಚೆಕ್ ಮೂಲಕ ಕಟ್ಟಿದ ವೈದ್ಯಕೀಯ ವಿಮೆಯ ಪ್ರೀಮಿಯಂ ಮೊತ್ತ ₹ 35,000. (ಪಾಲಸಿಯನ್ನು ಅವರ ತಂದೆಯ ಮೇಲೆ ತೆಗೆದುಕೊಳ್ಳಲಾಗಿದೆ. ಅವರ ತಂದೆ ಹಿರಿಯ ನಾಗರಿಕರು)

ಶ್ರೀ A ಅವರು ಅಂಗವಿಕಲ ವ್ಯಕ್ತಿಯಾಗಿದ್ದು ತೀವ್ರ ವಿಕಲಾಂಗತೆ ಹೊಂದಿದ್ದಾರೆ. ತೆರಿಗೆ ವರ್ಷ 2018-19 ಕ್ಕೆ ಅನ್ವಯವಾಗುವಂತೆ ಶ್ರೀ A ಅವರ ಒಟ್ಟು ಆದಾಯವನ್ನು ಕಂಡುಹಿಡಿಯಿರಿ.

Mr. A submits the following information :

(a) Income from Salary (computed) ₹ 10,50,000

(b) Income from House Property (computed) ₹ 2,50,000

(c) Interest on Bank Fixed Deposit ₹ 45,000 (net)

(d) Winning from Horse Race ₹ 70,000 (net)

(e) Life Insurance Premium paid ₹ 70,000

(f) Contribution to PPF ₹ 30,000

(g) Rent paid towards residential house ₹ 12,000 P.M. (He doesn't own any residential house)

(h) Medical Insurance Premium paid by crossed cheque ₹ 35,000 (Policy is taken on his father, who is a senior citizen)

Mr. A is physically handicaped person with severe disability. Compute his Total Income for the A.Y. 2018-19.

9. ಶ್ರೀ ರಾಮ್ ಎಂಬುವರು ಮೈಸೂರಿನ ಒಬ್ಬ ಮುಖ್ಯ ಲೆಕ್ಕ ಪರಿಶೋಧಕರಾಗಿದ್ದಾರೆ. ಅವರು ತಮ್ಮ ಲೆಕ್ಕ ಪುಸ್ತಕಗಳನ್ನು ನಗದು ಪದ್ಧತಿಯಲ್ಲಿ ಬರೆಯುತ್ತಾರೆ. ದಿನಾಂಕ 31-3-2018 ಕ್ಕೆ ಅಂತ್ಯವಾಗುವಂತೆ ಅವರ ಸ್ವೀಕೃತಿ ಮತ್ತು ಪಾವತಿಗಳ ತಖ್ತೆಯನ್ನು ನೀಡಲಾಗಿದೆ.

ಸ್ವೀಕೃತಿ ಮತ್ತು ಪಾವತಿ ಖಾತೆ 31-3-2018 ಕ್ಕೆ ಅಂತ್ಯಗೊಳ್ಳುವಂತೆ

| ಸ್ವೀಕೃತಿಗಳು | | ₹ | ಪಾವತಿಗಳು | | ₹ |
|---|---|---|---|---|---|
| ಗೆ, ಪ್ರಾರಂಭಿಕ ಶಿಲ್ಕು | | 25,000 | ರಿಂದ ಸಿಬ್ಬಂದಿ ಸಂಬಳ | | |
| ಗೆ, ತೆರಿಗೆ ಸಲಹೆಯಿಂದ ಬಂದ ಶುಲ್ಕ | | | 2016-17 | 8,000 | |
| 2017-18 | 2,60,000 | | 2017-18 | 24,000 | |
| 2018-19 | 20,000 | 2,80,000 | 2018-19 | 2,000 | 34,000 |
| ಗೆ, ಲೆಕ್ಕ ಪರಿಶೋಧಕ ಶುಲ್ಕ | | 2,75,000 | ರಿಂದ ಕಛೇರಿ ಬಾಡಿಗೆ | | 24,000 |
| ಗೆ, ಗಿರಾಕಿಗಳಿಂದ ಬಂದ ಉಡುಗೊರೆ | | 78,000 | ರಿಂದ ಲೆಕ್ಕ ಪರಿಶೋಧಕದ ಖರ್ಚುಗಳು | | 62,500 |
| ಗೆ, ವೃತ್ತಿಪರ ಜರ್ನಲ್‌ನಿಂದ ಬಂದ ಸಂಭಾವನೆ | | 25,000 | ರಿಂದ ಖರೀದಿ ಮಾಡಿದ ಕಾರು | | 3,50,000 |
| ಗೆ, ವಿಶೇಷ ದಲ್ಲಾಳಿ ಹಣ | | 60,000 | ರಿಂದ ಕಾರಿನ ವೆಚ್ಚಗಳು | | 45,000 |
| ಗೆ, ಬ್ಯಾಂಕಿನಿಂದ ಪಡೆದ ಸಾಲ | | 3,00,000 | ರಿಂದ ವೈಯಕ್ತಿಕ ಖರ್ಚುಗಳು | | 18,000 |
| ಗೆ, ನಿರ್ದೇಶಕರ ಶುಲ್ಕ | | 10,000 | ರಿಂದ ಖರೀದಿ ಮಾಡಿದ ಗಣಕಯಂತ್ರ ಕಛೇರಿಗೆ | | 60,000 |
| ಗೆ, ಹಿಂದು ಕೂಡು – ಕುಟುಂಬದಿಂದ ಪಡೆದ ಪಾಲು | | 90,000 | ರಿಂದ ಖರೀದಿ ಮಾಡಿದ ವೃತ್ತಿಪರ ಪುಸ್ತಕ | | 12,000 |
| ಗೆ, ಭಾರತೀಯ ಕಂಪನಿಯಿಂದ ಬಂದ ಲಾಭಾಂಶ | | 45,000 | ರಿಂದ CA ಸಂಸ್ಥೆಗೆ ಕಟ್ಟಿದ ಸದಸ್ಯತ್ವದ ಶುಲ್ಕ | | 25,000 |
| | | | ರಿಂದ ಮರುಪಾವತಿ ಮಾಡಿದ ಸಾಲ | | 1,20,000 |
| | | | ರಿಂದ ಸಾಲದ ಮೇಲಿನ ಬಡ್ಡಿ | | 40,000 |
| | | | ರಿಂದ ಅಂತ್ಯದ ಶಿಲ್ಕು | | 3,97,500 |
| | | 11,88,000 | | | 11,88,000 |

ಇತರೆ ಮಾಹಿತಿಗಳು :

(1) ಶೇ 40ರಷ್ಟು ವಾಹನದ ವೆಚ್ಚ ಖಾಸಗಿಯಾಗಿದೆ.

(2) ಕಛೇರಿಯ ಗಣಕಯಂತ್ರವನ್ನು ದಿನಾಂಕ 15-12-2017 ರಂದು ಖರೀದಿಸಿ ಉಪಯೋಗಿಸಲಾಗಿದೆ.

(3) ಗಿರಾಕಿಯಿಂದ ಬಂದ ನಗದು ಉಡುಗೊರೆ ₹ 20,000 ಹಣವನ್ನು ಪುಸ್ತಕದಲ್ಲಿ ದಾಖಲಿಸಿಲ್ಲ.

(4) ಶೇ 60 ರಷ್ಟು ಬ್ಯಾಂಕಿನ ಸಾಲವನ್ನು ವೃತ್ತಿಗಾಗಿ ಉಪಯೋಗಿಸಲಾಗಿದೆ.

(5) ಕಾರಿನ ಮೇಲೆ ಶೇ 15 ವರ್ಷಕ್ಕೆ ಹಾಗೂ ಗಣಕಯಂತ್ರ ಮತ್ತು ವೃತ್ತಿಪರ ಪುಸಕಗಳ ಮೇಲೆ ಶೇ 40 ರಷ್ಟು ವರ್ಷಕ್ಕೆ ಸವಕಳಿಯನ್ನು ಮಾಡಬೇಕಾಗಿದೆ. ತೆರಿಗೆ ವರ್ಷ 2018-19 ಕ್ಕೆ ಅನ್ವಯವಾಗುವಂತೆ ಶ್ರೀ ರಾಮ್ ಅವರ ವೃತ್ತಿ ಆದಾಯವನ್ನು ಕಂಡುಹಿಡಿಯಿರಿ.

Sri Ram is a leading chartered Accountant at Mysore. He keeps his book on cash basis and his summarised Receipts and Payments A/c for the year ending 31-3-2018 is given below :

Receipts and Payments A/c for the year ending 31-3-2018

| Receipts | Amt (₹) | Payments | Amt (₹) |
|---|---|---|---|
| To opening Balance b/d | 25,000 | By staff salary<br>2016-17 8,000<br>2017-18 24,000<br>2018-19 2,000 | 34,000 |
| To Tax Consultancy Fee<br>2017-18 2,60,000<br>2018-19 20,000 | 2,80,000 | | |
| To Audit Fee | 2,75,000 | By Office rent | 24,000 |
| To Gift from clients | 78,000 | By Audit expenses | 62,500 |
| To Remuneration from Professional journals | 25,000 | By purchase of car | 3,50,000 |
| To Special commission | 60,000 | By car expenses | 45,000 |
| To Loan from Bank | 3,00,000 | By Personal expenses | 18,000 |
| To Director fee | 10,000 | By Purchase of office computer | 60,000 |
| To Share from H.UF | 90,000 | By Purchase of professional books | 12,000 |
| To Dividend from Indian Company | 45,000 | By C.A. Institute membership fee | 25,000 |
| | | By Repayment of Loan | 1,20,000 |
| | | By Interest on Loan | 40,000 |
| | | By Closing balance C/d | 3,97,500 |
| | 11,88,000 | | 11,88,000 |

**Adjustments :**

(1) 40% of car expenses are in respect of personal use of Car.

(2) Office Computer was purchased and put into use for profession from 15-12-2017.

(3) Cash gift of ₹ 20,000 received from Client was not recorded in the books.

(4) 60% of loan from Bank was used for profession.

(5) Depreciation is allowed at the rate of 15% P.A. on car and 40% P.A. both on computer and professional books.

Calculate his income from profession for the A.Y. 2018-19.

10. ಶ್ರೀ ಅಭಿರಾಮ್ ಅವರ ಲಾಭ ಮತ್ತು ನಷ್ಟದ ಖಾತೆ 31-3-2018 ರ ಅಂತ್ಯಕ್ಕೆ :

| ವಿಷಯಗಳು | (₹) | ವಿಷಯಗಳು | (₹) |
|---|---|---|---|
| ಗೆ ಆರಂಭಿಕ ಸರಕುಗಳು | 90,000 | ಯಿಂದ ಮಾರಾಟ | 7,50,000 |
| ಗೆ ಖರೀದಿಗಳು | 1,80,000 | ಯಿಂದ ಅಂತ್ಯದ ಸರಕು | 1,35,000 |
| ಗೆ ಕೂಲಿ | 24,000 | ಯಿಂದ ವಾಪಸ್ಸು ಪಡೆದ ಕರಡು ಸಾಲ (ಹಿಂದೆ ಸ್ವೀಕರಿಸದ) | 25,750 |
| ಗೆ ಸಿಬ್ಬಂದಿಯ ಸಂಬಳ | 45,000 | ಯಿಂದ ಸಾಲ ಪತ್ರದ ಮೇಲಿನ ಬಡ್ಡಿ | 90,000 |
| ಗೆ ಲೆಕ್ಕ ಪರಿಶೋಧಕ ಶುಲ್ಕ | 12,000 | ಯಿಂದ ಅಂಚೆ ಕಛೇರಿ ಉಳಿತಾಯ ಖಾತೆಯ ಬಡ್ಡಿ | 10,000 |
| ಗೆ ಕರಡು ಸಾಲ | 5,000 | | |
| ಗೆ ಆದಾಯ ತೆರಿಗೆ | 10,500 | | |
| ಗೆ ಸರಕು ಮತ್ತು ಸೇವಾ ತೆರಿಗೆ ಕಟ್ಟಿದ್ದು | 16,250 | | |
| ಗೆ ಸರಕು ಮತ್ತು ಸೇವಾ ತೆರಿಗೆ ನಿಬಂದನೆ | 20,000 | | |
| ಗೆ ಕಾರಿನ ಮೇಲೆ ಸವಕಳಿ | 30,000 | | |
| ಗೆ ಕಾರಿನ ವೆಚ್ಚಗಳು | 28,000 | | |
| ಗೆ ಪೇಟೆಂಟ್ ಖರೀದಿ | 1,20,000 | | |
| ಗೆ ವೈಜ್ಞಾನಿಕ ಸಂಶೋಧನೆಗಾಗಿ ನ್ಯಾಷನಲ್ ಲ್ಯಾಬೋರೇಟರಿಗೆ ಕೊಟ್ಟ ದೇಣಿಗೆ | 75,000 | | |
| ಗೆ ಬಂಡವಾಳದ ಮೇಲಿನ ಬಡ್ಡಿ | 15,000 | | |
| ಗೆ ಆದಾಯ ತೆರಿಗೆ ನಿಬಂದನೆ | 60,000 | | |
| ಗೆ ನಿವ್ವಳ ಲಾಭ | 2,80,000 | | |
| | 10,10,750 | | 10,10,750 |

ಇತರೆ ವಿಷಯಗಳು :

1. ಆರಂಭ ಹಾಗೂ ಅಂತ್ಯದ ಸರಕು ಎರಡನ್ನು ಶೇ 10ರಷ್ಟು ಕಡಿಮೆ ಮೌಲ್ಯ ಮಾಡಲಾಗಿದೆ.
2. ಲೆಕ್ಕ ಪರಿಶೋಧಕನ ಶುಲ್ಕವನ್ನು ನಗದು ರೂಪದಲ್ಲಿ ಕೊಡಲಾಗಿದೆ.
3. ಶೇ 70 ಕಾರಿನ ವೆಚ್ಚ ವ್ಯವಹಾರಕ್ಕೆ ಉಪಯೋಗಿಸಲಾಗಿದೆ.
4. ಪೇಟೆಂಟ್ ಅನ್ನು ದಿನಾಂಕ 1-7-2017 ರಂದು ಖರೀದಿಸಿ ಉಪಯೋಗಿಸಲಾಗಿದೆ.
5. ಸರಕು ಮತ್ತು ಸೇವಾ ತೆರಿಗೆ ನಿಬಂದನೆ ಹಾಗೂ ಆದಾಯ ತೆರಿಗೆ ನಿಬಂದನೆ ಹಣದಿಂದ ₹ 3,000 ಸರಕು ಮತ್ತು ಸೇವಾ ತೆರಿಗೆಯನ್ನು ಹಾಗೂ ₹ 2,500 ಆದಾಯ ತೆರಿಗೆಯನ್ನು ತೆರಿಗೆ ಪಟ್ಟಿ ಸಲ್ಲಿಸುವ ಮುಂಚಿತವಾಗಿ ಕಟ್ಟಲಾಗಿದೆ.

ತೆರಿಗೆ ವರ್ಷ 2018-19 ಕ್ಕೆ ಅನ್ವಯವಾಗುವಂತೆ ವ್ಯವಹಾರದಿಂದ ಬಂದ ಆದಾಯವನ್ನು ಕಂಡುಹಿಡಿಯಿರಿ.

The profit and loss A/c of Mr. Abiram for the year ending 31-3-2018 is given below :

| Particular | Amt. (₹) | Particular | Amt. (₹) |
|---|---|---|---|
| To Opening stock | 90,000 | By sales | 7,50,000 |
| To Purchases | 1,80,000 | By closing stock | 1,35,000 |
| To Wages | 24,000 | By Bad debts recovered Previously disallowed | 25,750 |
| To Staff Salary | 45,000 | By Interest on Debenture | 90,000 |
| To Audit fee | 12,000 | By Interest on P.O. SB A/c | 10,000 |
| To Bad debts | 5,000 | | |
| To Income Tax | 10,500 | | |
| To GST Paid | 16,250 | | |
| To GST Provision | 20,000 | | |
| To Depreciation on car | 30,000 | | |
| To Car Expenses | 28,000 | | |
| To Patent Purchased | 1,20,000 | | |
| To Contribution to National Laboratory for Science Research | 75,000 | | |
| To Interest on capital | 15,000 | | |
| To Income Tax Provision | 60,000 | | |
| To Net Profit | 2,80,000 | | |
| | 10,10,750 | | 10,10,750 |

**Adjustments :**

1. Both opening and closing stock were under valued by 10%.

2. Audit fee was paid in Cash.

3. 70% of car expenses are relate to use of car for business.

4. Patents was purchased and put into use for business from 1st July 2017.

5. Of the GST provision and Income Tax provision GST of ₹ 3,000 and IT of ₹ 2,500 were paid before filing the return.

Compute his income from the Business for the A.Y. 2018-19.

**11.** ಶ್ರೀ ಆನಂದ್ ಎಂಬುವರು ಈ ಕೆಳಗಿನ ಆಸ್ತಿಯನ್ನು ಆರ್ಥಿಕ ವರ್ಷ 2017-18 ರಲ್ಲಿ ಮಾರಿದ್ದಾರೆ.

(a) ವಾಸದ ಮನೆ : ಇವರು ಈ ಮನೆಯನ್ನು 1998-99 ರಲ್ಲಿ ₹ 5,25,000 ಹಣವನ್ನು ಕೊಟ್ಟು ಖರೀದಿಸಿದ್ದಾರೆ. ಇವರು 1999-2000 ರಲ್ಲಿ ಹೆಚ್ಚುವರಿ ಕೊಠಡಿಯನ್ನು ₹ 20,000 ಕ್ಕೆ ಕಟ್ಟಿದ್ದಾರೆ ಹಾಗೂ ಮೊದಲನೇ ಮಹಡಿ ಮನೆಯನ್ನು 2008-09 ರಲ್ಲಿ ₹ 3,80,000 ವೆಚ್ಚ ಮಾಡಿ ಕಟ್ಟಿದ್ದಾರೆ. ಈ ಮನೆಯ ನ್ಯಾಯ ಯೋಜಿತ ಬೆಲೆ ದಿನಾಂಕ 1-4-2001 ರಂದು ₹ 7,25,000 ಇರುತ್ತದೆ. ದಿನಾಂಕ 30-6-2017 ರಂದು ಈ ಮನೆಯನ್ನು ₹ 98,00,000 ಕ್ಕೆ ಮಾರಿ, ಅದಕ್ಕೆ ಶೇ 2 ರಷ್ಟು ದಲ್ಲಾಳಿಯನ್ನು ಕೊಟ್ಟಿರುತ್ತಾರೆ. ಹಾಗೂ ದಿನಾಂಕ 18-12-2017 ರಂದು ಒಂದು ಹೊಸ ಮನೆಯನ್ನು ₹ 35,00,000 ಕ್ಕೆ ಖರೀದಿಸಿರುತ್ತಾರೆ.

(b) A ಕಂಪನಿಯ ಸಾಲ ಪತ್ರಗಳು : 2014-15 ರಲ್ಲಿ ಇದನ್ನು ₹ 5,00,000 ಕ್ಕೆ ಖರೀದಿಸಿ ದಿನಾಂಕ 30-6-2017 ರಂದು ₹ 5,75,000 ಕ್ಕೆ ಮಾರಿದ್ದಾರೆ.

(c) ಸಂಚಾರಿ ದೂರವಾಣಿ ಸ್ವಂತಕ್ಕೆ : ಇದನ್ನು ದಿನಾಂಕ 30-9-2017 ರಲ್ಲಿ ₹ 48,000 ಕೊಟ್ಟು ಖರೀದಿ ಮಾಡಿ, ₹ 50,000 ಕ್ಕೆ ದಿನಾಂಕ 16-12-2017 ರಂದು ಮಾರಾಟ ಮಾಡಿದ್ದಾರೆ.

(d) ಚಿನ್ನ ಆಭರಣಗಳು ಸ್ವಂತಕ್ಕೆ : ಇದನ್ನು 2012-13 ರಲ್ಲಿ ₹ 6,50,000 ಹಣವನ್ನು ಕೊಟ್ಟು ಖರೀದಿ ಮಾಡಿ ದಿನಾಂಕ 13-02-2018 ರಂದು ₹ 65,00,000ಕ್ಕೆ ಮಾರಿದ್ದಾರೆ.

ಹಣದುಬ್ಬರದ ಸೂಚ್ಯಂಕ : 2001-02 : 100, 2008-09 : 137, 2012-13 : 200, 2014-15 : 240 ಮತ್ತು 2017-18 : 272.

ತೆರಿಗೆ ವರ್ಷ 2018-19 ಕ್ಕೆ ಅನ್ವಯವಾಗುವಂತೆ ಇವರ ಬಂಡವಾಳ ಲಾಭವನ್ನು ಕಂಡುಹಿಡಿಯಿರಿ.

Mr. Anand sold the following assets during the financial year 2017-18 :

(a) Residential house : It was purchased by him during 1998-99 for ₹ 5,25,000. He has constructed an additional room during 1999-2000 for ₹ 20,000 and first floor during 2008-09 for ₹ 3,80,000. The Fair Market Value of the house on 1-4-2001 was ₹ 7,25,000. He sold the house on 30th June 2017 for ₹ 98,00,000 and paid 2% commission. He purchased a new residential house on 18th December 2017 for ₹ 35,00,000.

(b) Debenture of A Co. : It was purchased by him during 2014-15 for ₹ 5,00,000 and sold on 30th June 2017 for ₹ 5,75,000.

(c) Personal Mobile Phone : It was purchased by him on 30th September 2017 for ₹ 48,000 and sold on 16th December 2017 for ₹ 50,000.

(d) Personal gold ornaments : It was purchased by him during 2012-13 for ₹ 6,50,000 and sold them on 13th Feb. 2018 for ₹ 65,00,000. CII for the years 2001-02 : 100, 2008-09 : 137, 2012-13 : 200, 2014-15 : 240 and 2017-18 : 272.

Calculate his income from capital gain for the A.Y. 2018-19.

- o 0 o -